ನಡೆದು ಹೋಗಿತ್ತು ಎನ್ನುವ ಸತ್ಯ ಕಸ್ತೂರಿಗೆ ಗೊತ್ತಾಗಿದ್ದು ಮದುವೆಯ ನಂತರ. ವಾರಗಿತ್ತಿ ಅಷ್ಟಿಷ್ಟು ಕಿವಿ ಕಚ್ಚಿದ ಮೇಲೆ. ತಮ್ಮ ಅಪೇಕ್ಷೆಯ, ನಿರೀಕ್ಷೆಯ ನೂರರಲ್ಲಿ ಒಂದಂಶವೂ ಇಲ್ಲದವಳನ್ನು ಸೊಸೆಯಾಗಿ ಸ್ವೀಕರಿಸಲು ಸರ್ವಥಾ ಸಿದ್ಧರಾಗಿರಲಿಲ್ಲ ಸುವರ್ಣ. ಉಪವಾಸ ಸತ್ಯಾಗ್ರಹದ ವರೆಗೆ ಪರಿಸ್ಥಿತಿ ಬಿಗಡಾಯಿಸಿತ್ತು. ಅಮ್ಮನ ಮಾತನ್ನು ಕನಸಿನಲ್ಲೂ ಮೀರದ ಮಗ ಈ ವಿಷಯದಲ್ಲಿ ಅಮ್ಮ ಬಿಗುವಾದಷ್ಟೂ ತಾನೂ ಕಠಿಣವಾಗುತ್ತಾ ಹೋದ. ಸತ್ಯಾಗ್ರಹ ಮಾಡಲು ತನಗೂ ಬರುತ್ತದೆ ಎಂದು ತೋರಿಸಿಕೊಟ್ಟ. ಅನಿವಾರ್ಯವಾಗಿ ಸೋಲೊಪ್ಪಿಕೊಂಡರು ಸುವರ್ಣ. 'ನಿನ್ನ ಹಣೇಬರ' ಎನ್ನುವ ಅರೆಮನಸ್ಸಿನ ಒಪ್ಪಿಗೆ ಸಿಕ್ಕಿತು. ಕಸ್ತೂರಿ ಈ ಮನೆಯ ಕಿರಿಸೊಸೆಯಾಗಿ ಮನೆ ತುಂಬಿದರೂ ಅತ್ತೆಯ ಮನಸ್ಸು ಇನ್ನೂ ಅವಳನ್ನು ಒಪ್ಪಿಕೊಳ್ಳಲು ತಯಾರಾಗಿಲ್ಲ. 'ತನ್ನ ಸೊಸೆ' ಎಂದು ನಾಲ್ಕು ಜನ ಸೇರಿದಲ್ಲಿ ಪರಿಚಯಿಸಲು ಸುವರ್ಣ ಸಿದ್ಧರಾಗಿಲ್ಲ.

'ನೀವ್ಯಾಕೆ ನನ್ನ ಮದುವೆ ಮಾಡ್ಕೊಂಡ್ರಿ?' ಮದುವೆಯ ನಂತರ ಮೊದಲ ಬಾರಿಗೆ ಈ ಪ್ರಶ್ನೆ ಕೇಳಿದ್ದಳು ಕಸ್ತೂರಿ.

"ಯಾಕೆ? ಏನಾಯ್ತು ಈಗ?" ಲಘುವಾಗಿ ಕೇಳಿದ್ದ ರಾಜೀವ.

"ನನ್ನನ್ನ ನೀವು ಮದುವೆಯಾಗೋದು ಅತ್ತೆಗೆ ಚೂರೂ ಇಷ್ಟ ಇರ್ಲಿಲ್ವಂತೆ..."

"ಮದುವೆಯಾಗಿದ್ದು ಅತ್ತೆಯ ಮಗ. ಅವನ ಮದುವೆ ಅವನ ಇಷ್ಟ..."

"ನಿಮ್ಮಮ್ಮನ ಮಾತನ್ನೂ ಮೀರಿ ಯಾಕೆ ನನ್ನ ಮದುವೆ ಆದ್ರಿ? ಸತ್ಯ ಹೇಳಿ..."

"ಏನಿದೆ ಹೇಳೋಕೆ? ನನ್ನ ಪ್ರೀತೀಲಿ ನಿಂಗೇನಾದ್ರೂ ವಂಚನೆ ಕಾಣಿಸ್ತಿದೆಯಾ?"

"ಹಾಗಲ್ಲ. ತಮಗೆ ಸರಿಜೋಡಿ ಅಲ್ಲದವರನ್ನು ಇಷ್ಟಪಡೋಕೂ ಒಂದು ಕಾರಣ ಇರಬೇಕಲ್ವಾ?"

"ಹೇಳಿ ಕೇಳಿ ಪ್ರೀತಿ ಹುಟ್ಟುತ್ತೇನೇ? ಅದೊಂದು ಮಾಯೆ ಅಂತ ಗೊತ್ತಿಲ್ವಾ ನಿಂಗೆ?"

"ಮತ್ತೆ ನಾಟಕದ ಮಾತಾಡ್ಬೇಡಿ. ಸತ್ಯ ಹೇಳಿ."

ರಾಜೀವ ಅವಳ ಪಕ್ಕ ಕೂತು ಅವಳ ಗಲ್ಲವನ್ನು ತುದಿಬೆರಳಲ್ಲಿ ಎತ್ತಿದ್ದ. ಕಣ್ಣಲ್ಲಿ ಕಣ್ಣಿಟ್ಟು ಹೇಳಿದ್ದ,

"ಯಾವಾಗ್ಲೂ ಸಿಹೀನೇ ತಿಂತಿದ್ರೆ ವಾಕರಿಕೆ ಬರುತ್ತಾ ಇಲ್ವಾ ನೀನೇ ಹೇಳು..."

"ಅಂದ್ರೆ?"

"ಶೋಕೇಸಿನ ಗೊಂಬೆಗಳ ಥರ ಇರೋರನ್ನ ನೋಡಿ ನೋಡಿ ನಂಗೆ ಬೇಜಾರಾಗ್ಬಿಟ್ಟಿತ್ತು ಕಣೇ..." ಅವನು ಮಾತು ಮುಗಿಸುವುದರೊಳಗೆ ಕಸ್ತೂರಿ ತನ್ನ ಗಲ್ಲ ಹಿಡಿದಿದ್ದ ಅವನ ಕೈಯನ್ನು ತಳ್ಳಿ ದೂರ ಸರಿದು ಕೂತಿದ್ದಳು.

"ನಿಮ್ಮ ಮಾತು ಅರ್ಥ ಆಗುತ್ತೆ ನಂಗೆ. ನಾನು ದಡ್ಡಿ ಅಲ್ಲ" ಅಂದಿದ್ದಳು.

"ನನ್ನ ಮಾತು ಪೂರ್ತಿ ಕೇಳಿಸ್ಕೋ. ನೀನು ದಡ್ಡಿ ಅಲ್ಲ ಅಂತ್ಲೇ ನಿನ್ನನ್ನ ಇಷ್ಟಪಟ್ಟಿದ್ದು. ನಂಗೆ ನನ್ನ ಸರಿಸಮವಾಗಿರೋ ಜೊತೆಗಾತಿ ಬೇಕಿತ್ತೇ ವಿನಾ ಅಲಂಕಾರ ಮಾಡ್ಕೊಂಡು ಅಮ್ಮನನ್ನು ಮೆಚ್ಚಿಸೋಳಲ್ಲ."

"ನೋಡೋಕೆ ಚೆನ್ನಾಗಿದ್ರೆ ಬುದ್ಧಿ ಕಡಿಮೆ ಅಂತಾನಾ? ಸುಳ್ಳೇ ಏನೋ ಒಂದು ಹೇಳ್ಬೇಡಿ..."

"ಹಾಗಲ್ಲ ಕಣೇ. ಬುದ್ಧಿ ಎಷ್ಟಿದೆ ಅನ್ನೋದು ಗೊತ್ತಾಗೋದು ಯಾವಾಗ? ಮದುವೆ ಆದ್ಮೇಲೆ ಅಲ್ವಾ? ಎರಡು ವರ್ಷದಿಂದ ನಿನ್ನ ನೋಡಿದ್ದೆ. ನಿನ್ನ ಅರ್ಥ ಮಾಡ್ಕೊಂಡಿದ್ದೆ."

"ಏನೇ ಅಂದ್ರೂ ನಾನು ಚೆನ್ನಾಗಿಲ್ಲ ಅನ್ನೋದನ್ನ ನನ್ನ ಮುಖದೆದುರೇ ಹೇಳ್ಬಿಟ್ರಿ..."

ರಾಜೀವ ಅವಳ ಸನಿಹಕ್ಕೆ ಸರಿದು ಕೂತು ಭುಜ ಬಳಸಿದ್ದ.

"ನೀನು ಏನೇನೋ ಕಲ್ಪನೆ ಮಾಡ್ಕೊಂಡ್ರೆ ನನ್ನ ಜವಾಬ್ದಾರಿ ಇಲ್ಲ. ನೋಡು ಕಸ್ತೂರಿ, ಯಾವತ್ತೂ ಅಮ್ಮನಿಗೆ ಎದುರಾಡ್ದಿದ್ದೋನು ನಿನ್ನನ್ನೇ ಮದುವೆ ಆಗ್ತೀನಿ ಅಂತ ಹಟ ಹಿಡಿದು ಮದುವೆ